ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್‌ಐಸಿಪಿಎಸ್/ಕೋವಿಡ್–19/2020–21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:09.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್–19ರ ಹಿನ್ನೆಲೆಯಲ್ಲಿ ಇನ್‌ಫ್ರಾರೆಡ್ ಡಿಜಿಟಲ್ ನಾನ್‌ಕಾನ್ಟ್ಯಾಕ್ಟ್–ಥರ್ಮಾಮೀಟರ್ ಖರೀದಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್–19ರ ಹಿನ್ನೆಲೆಯಲ್ಲಿ ಬಾಲನ್ಯಾಯ ಕಾಯ್ದೆಯಡಿ ನೋಂದಾಯಿಸಲ್ಪಟ್ಟ ಪ್ರತಿಯೊಂದು ಸರ್ಕಾರಿ ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವೈದ್ಯರ ಸಹಾಯದಿಂದ ಮಕ್ಕಳ ವೈದ್ಯಕೀಯ ತಪಾಸಣೆಯನ್ನು ಆಗಿಂದಾಗ್ಗೆ ನಡೆಸಲಾಗುತ್ತಿದೆ. ಕೆಲವು ಮಕ್ಕಳ ಪಾಲನಾ ಸಂಸ್ಥೆಗಳು ಮಕ್ಕಳ ತಾಪಮಾನವನ್ನು ದಿನನಿತ್ಯ ತಪಾಸಣೆ ನಡೆಸಿ ರಿಜಿಸ್ಟರ್‌ನಲ್ಲಿ ನಮೂದಿಸಲಾಗುತ್ತಿದ್ದು, ಅದರಂತೆ ಎಲ್ಲಾ ನೋಂದಾಯಿಸಲ್ಪಟ್ಟ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ದಿನನಿತ್ಯ ಮಕ್ಕಳ ತಾಪಮಾನವನ್ನು ವೈದ್ಯರ ಸಹಾಯದೊಂದಿಗೆ ಪರಿಶೀಲಿಸಲು ಅನುವಾಗುವಂತೆ, ಪ್ರತಿಯೊಂದು ಸರ್ಕಾರಿ ಮತ್ತು ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಇನ್‌ಫ್ರಾರೆಡ್ ಡಿಜಿಟಲ್ ನಾನ್‌ಕಾನ್ಟ್ಯಾಕ್ಟ್–ಥರ್ಮಾಮೀಟರ್‌ಗಳನ್ನು ಪ್ರತಿಯೊಂದು ಸಂಸ್ಥೆ ಮಟ್ಟದಲ್ಲಿಯೇ ಮತ್ತು ಸಂಸ್ಥೆಯ ವತಿಯಿಂದಲೇ ಖರೀದಿಸಲು ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅಗತ್ಯ ಕ್ರಮವಹಿಸುವುದು.

ನಂತರ ಸದರಿ ಉಪಕರಣದಿಂದ ಸಂಸ್ಥೆಯಲ್ಲಿರುವ ಎಲ್ಲಾ ಮಕ್ಕಳ ತಾಪಮಾನವನ್ನು ವೈದ್ಯರ ಸಂಪರ್ಕದೊಂದಿಗೆ ದಿನನಿತ್ಯ ಪರೀಕ್ಷಿಸಲು ಹಾಗೂ ಪರೀಕ್ಷಿಸಿದ ನಂತರ ಪ್ರತಿ ಮಗುವಿನ ತಾಪಮಾನದ ಮಾಹಿತಿಯನ್ನು ಒಂದು ರಿಜಿಸ್ಟರ್‌ನಲ್ಲಿ ದಿನಾಂಕವಾರು, ಮಕ್ಕಳವಾರು ನಮೂದಿಸಲು ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಯ ಮುಖ್ಯಸ್ಥರಿಗೆ ಸೂಚಿಸಿ, ತೆಗೆದುಕೊಂಡ ಕ್ರಮದ ಕುರಿತು(ನಾನ್‌ಕಾನ್ಟ್ಯಾಕ್ಟ್–ಥರ್ಮಾಮೀಟರ್ ಖರೀದಿಸಿದ ಬಗ್ಗೆ ಮತ್ತು ರಿಜಿಸ್ಟರ್ ನಿರ್ವಹಿಸುತ್ತಿರುವ ಕುರಿತು) ಮೇಲ್ವಿಚಾರಣೆ ನಡೆಸಿ, ಪ್ರಧಾನ ಕಛೇರಿಗೆ 3 ದಿನಗಳೊಳಗೆ ವರದಿ ನೀಡಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

09.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

REDMI NOTE 8
AI QUAD CAMERA